**ದಿನಾಂಕಃ 23.12.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ.ANN ರವರಿಂದಃ**

1) ನಾನು **Carpenter** ಕೆಲಸ ಮಾಡುತ್ತೇನೆ. ನಾನು ಒಂದು ದಿನಕ್ಕೆ **400** ರೂಪಾಯಿ ಸಂಪಾದನೆ ಮಾಡುತ್ತೇನೆ. ನನ್ನ ಅರ್ಜಿಯಲ್ಲಿ ಮಾಡಿರುವ ಸಹಿಯು ಮತ್ತು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಇರುವಂತಹ ಸಹಿಯು ಬೇರೆ ಬೇರೆ ರೀತಿ ಕಾಣಿಸುತ್ತವೆ ಎಂದರೆ ಸರಿ. ಈ ಪ್ರಕರಣವನ್ನು ಹಾಕುವ ಸಮಯದಲ್ಲಿ ನಾನು ನನ್ನ ಆಧಾರ್ ಕಾರ್ಡಿನ ಪ್ರತಿಯನ್ನು ಹಾಜರುಪಡಿಸಿದ್ದೆನು ಮತ್ತು ಅದು ಕಡತದಲ್ಲಿ ಲಭ್ಯ ಇದೆ ಎಂದರೆ ಸರಿ.

2) ಈಗ ಮಾನ್ಯ ಎದುರುದಾರರ ಪರ ವಕೀಲರು ಈ ದಾಖಲೆಯನ್ನು ನಿಶಾನೆಯನ್ನಾಗಿ ಗುರುತಿಸಬೇಕು ಎಂದು ಪ್ರಾರ್ಥಿಸಿದ್ದಾರೆ. ಈ ದಾಖಲೆಯನ್ನು ಅಂದರೆ ಅರ್ಜಿಯ ಜೊತೆಯಲ್ಲಿ ಹಾಜರುಪಡಿಸಿರುವಂತಹ ಆಧಾರ್ ಕಾರ್ಡ್ ದಾಖಲೆಯನ್ನು **identification** ಉದ್ದೇಶಕ್ಕಾಗಿ ನಿ.ಎಸ್.1 ಎಂದು ಗುರುತಿಸಿದೆ.

3) ಅದೇ ರೀತಿ ಅಪಘಾತದಲ್ಲಿ ಮರಣ ಹೊಂದಿದಂತಹ ದಿನೇಶ್ ರವರ ಆಧಾರ್ ಕಾರ್ಡ್ ಪ್ರತಿಯನ್ನು ಈ ಪ್ರಕರಣವನ್ನು ಸಲ್ಲಿಸುವ ಸಮಯದಲ್ಲಿ ಕೊಡಲಾಗಿತ್ತು. ಈಗ ಮಾನ್ಯ ಎದುರುದಾರರ ಪರ ವಕೀಲರು ಈ

ದಾಖಲೆಯನ್ನು ನಿಶಾನೆಯನ್ನಾಗಿ ಗುರುತಿಸಬೇಕು ಎಂದು ಪ್ರಾರ್ಥಿಸಿದ್ದಾರೆ. ಈ ದಾಖಲೆಯನ್ನು ಅಂದರೆ ಅರ್ಜಿಯ ಜೊತೆಯಲ್ಲಿ ಹಾಜರುಪಡಿಸಿರುವಂತಹ ದಿನೇಶ್ ರವರ ಆಧಾರ್ ಕಾರ್ಡ್ ದಾಖಲೆಯನ್ನು **identification** ಉದ್ದೇಶಕ್ಕಾಗಿ ನಿ.ಎಸ್.2 ಎಂದು ಗುರುತಿಸಿದೆ.

4) ನಮ್ಮ ಕುಟುಂಬದ ಸದಸ್ಯರೆಲ್ಲರಿಗೆ ಸಂಬಂಧಿಸಿದಂತಹ ವಾರಸುದಾರರ ದಾಖಲೆಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆಯು ಇರುವುದಿಲ್ಲ.

5) ಅಪಘಾತದಲ್ಲಿ ಮರಣ ಹೊಂದಿದಂತಹ ದಿನೇಶ್ ರವರು ನನ್ನ ಸಹೋದರ ಆಗಿದ್ದಾನೆ ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಆಧಾರ್ ಕಾರ್ಡ್ ಹಾಜರುಪಡಿಸಿದ್ದೇನೆ. ಸದರಿ ದಿನೇಶ್ ರವರಿಗೆ ಸಂಬಂಧಿಸಿದಂತಹ ಶಾಲಾ ದಾಖಲಾತಿಗಳನ್ನು ಹಾಜರುಪಡಿಸಲು ತೊಂದರೆ ಇದೆಯೋ ಹೇಗೆ ಎಂದರೆ ಅವುಗಳು ಮನೆಯಲ್ಲಿ ಇದೆ, ತರಿಸಿ ಹಾಜರುಪಡಿಸುತ್ತೇನೆ.

6) ಅಪಘಾತದಲ್ಲಿ ಮರಣ ಹೊಂದಿದಂತಹ ದಿನೇಶ್ ರವರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ಕಾಗದ ಪತ್ರಗಳನ್ನು ಹಾಜರುಪಡಿಸಿದ್ದೇನೆ. ದಿನೇಶ್ ರವರಿಗೆ ಸಂಬಂಧಿಸಿದಂತಹ ಯಾವುದೇ

ದಾಖಲೆಗಳನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಮತ್ತು ಈ ಬಗ್ಗೆ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

7) ದಿನೇಶ್ ರವರು ತಮ್ಮ ಜೀವಿತ ಕಾಲದಲ್ಲಿ ಒಂದು ತಿಂಗಳಿಗೆ **30** ಸಾವಿರ ರೂಪಾಯಿಗಳನ್ನು ಸಂಪಾದನೆ ಮಾಡುತ್ತಿದ್ದರು ಎನ್ನುವ ಬಗ್ಗೆ ಯಾವುದೇ ದಾಖಲೆಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ದಿನೇಶ್ ರವರು **30** ಸಾವಿರ ರೂಪಾಯಿಗಳನ್ನು ಸಂಪಾದನೆ ಮಾಡುತ್ತಿರಲಿಲ್ಲ ಮತ್ತು ಆ ಕಾರಣದಿಂದಲೇ ನಾನು ಅಂತಹ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು.

8) ದಿನೇಶ್ ರವರ ಅಂತ್ಯಕ್ರಿಯೆ ಮತ್ತು ವೈಕುಂಠ ಸಮಾರಾಧನೆ ಇತ್ಯಾದಿಗಳಿಗೆ ನಾವು ಯಾವುದೇ ಹಣವನ್ನು ಖರ್ಚು ಮಾಡಿರುವುದಿಲ್ಲ ಮತ್ತು ಆ ಕಾರಣದಿಂದಲೇ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸುಳ್ಳು.

9) ನಾನು **12** ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಜೀವನಕ್ಕೆ ಬೇಕಾಗುವಷ್ಟು ಹಣವನ್ನು ನಾನು ಸಂಪಾದನೆ ಮಾಡುತ್ತಿದ್ದೇನೆ.

10) ನನ್ನ ಸಹೋದರನಾದ ದಿನೇಶ ರವರ ಮರಣವು

ಯಾವ ರೀತಿ ಉಂಟಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸುಳ್ಳು. ನಾನು ನನ್ನ ಜೀವನಕ್ಕೆ ಬೇಕಾಗುವಷ್ಟು ಹಣವನ್ನು ಸಂಪಾದನೆ ಮಾಡುತ್ತಿದ್ದೇನೆ ಮತ್ತು ಆ ಕಾರಣದಿಂದ ಈ ಪ್ರಕರಣವನ್ನು ಸಲ್ಲಿಸುವಂತಹ ಅರ್ಹತೆ ನನಗೆ ಇರುವುದಿಲ್ಲ ಎಂದರೆ ನನ್ನ ಅಣ್ಣ ದಿನೇಶನ ಆದಾಯದಿಂದಲೇ ನಾವೆಲ್ಲರೂ ಬದುಕುತ್ತಿದ್ದೆವು.

11) ದಿನೇಶ ರವರು ನಮಗೆ ಯಾವ ರೀತಿ ಹಣದ ಸಹಾಯ ಮಾಡುತ್ತಿದ್ದರು ಎಂಬ ಬಗ್ಗೆ ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು ಹಾಜರುಪಡಿಸಿಲ್ಲ ಮತ್ತು ನನ್ನ ಅರ್ಜಿಯಲ್ಲಿ ಸಹಾ ಬರೆಸಿರುವುದಿಲ್ಲ ಎಂದರೆ ಸರಿ. ದಿನೇಶ್ ರವರ ಬ್ಯಾಂಕ್ ಸ್ಟೇಟ್ ಮೆಂಟ್ ಹಾಜರುಪಡಿಸಲು ನನಗೆ ತೊಂದರೆ ಇದೆಯೋ ಹೇಗೆ ಎಂದರೆ ಆ ಬಗ್ಗೆ ನನಗೆ ತಿಳಿಯುವುದಿಲ್ಲ.

12) ದಿನೇಶ ರವರು ನಮಗೆ ಯಾವುದೇ ಹಣವನ್ನು ಕೊಡುತ್ತಿರಲಿಲ್ಲ ಮತ್ತು ಆ ಕಾರಣದಿಂದಲೇ ದಿನೇಶ ರವರ ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸುಳ್ಳು.

13) ಕೇವಲ ಪರಿಹಾರವನ್ನು ಪಡೆಯುವ ಉದ್ದೇಶಕ್ಕಾಗಿ ನಾನು ಸುಳ್ಳು ಪ್ರಕರಣವನ್ನು ಮಾಡಿದ್ದೇನೆ ಎಂದರೆ ಸುಳ್ಳು.

14) ದಿನೇಶ್ ರವರ ತಪ್ಪಿನಿಂದಲೇ ಅಪಘಾತವು ಆಗಿದೆ ಮತ್ತು ಆತನ ಮರಣವು ಸಂಭವಿಸಿದೆ ಮತ್ತು ಎದುರುದಾರನ ತಪ್ಪಿನಿಂದ ಅಪಘಾತವು ಆಗಿರುವುದಿಲ್ಲ ಎಂದರೆ ಸುಳ್ಳು.

15) ನಿ.ಎಸ್.**1** ಮತ್ತು ನಿ.ಎಸ್.**2** ದಾಖಲೆಗಳಲ್ಲಿ ಇರುವಂತಹ ವಿವರಗಳು ಮತ್ತು ನಿ.ಪಿ.**11** ಮತ್ತು **12** ದಾಖಲೆಗಳಲ್ಲಿ ಇರುವಂತಹ ವಿವರಗಳು ಬೇರೆ ಬೇರೆ ರೀತಿ ಇವೆ ಎಂದರೆ ಸುಳ್ಳು.

16) ದಿನೇಶ್ ರವರ ಮೃತದೇಹವನ್ನು ನಾನೇ ಪಡೆದುಕೊಂಡು ನಮ್ಮ ಊರಿಗೆ ತೆಗೆದುಕೊಂಡು ಹೋಗಿದ್ದೇನೆ ಎನ್ನುವ ಬಗ್ಗೆ ಯಾವುದೇ ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸುಳ್ಳು.

17) ನಾನು ದಿನೇಶ್ ರವರ ಸಹೋದರ ಆಗಿರುವುದಿಲ್ಲ ಮತ್ತು ಈ ಬಗ್ಗೆ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

18) ಅಪಘಾತದ ಸಮಯದಲ್ಲಿ ಯಾರು ವಾಹನವನ್ನು ಚಾಲನೆ ಮಾಡುತ್ತಿದ್ದರು ಎಂಬುದಾಗಿ ನನ್ನ ಅರ್ಜಿಯಲ್ಲಿ ಬರೆದಿರುವುದಿಲ್ಲ ಎಂದರೆ ಸುಳ್ಳು.

19) ಈ ಪ್ರಕರಣವನ್ನು ಸಲ್ಲಿಸುವುದಕ್ಕಾಗಿ ಎಲ್ಲಾ ದಾಖಲೆಗಳನ್ನು ನಾನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು. ಯಾವುದೇ ಪರಿಹಾರವನ್ನು ಪಡೆಯುವ ಅರ್ಹತೆ ನನಗೆ ಇರುವುದಿಲ್ಲ ಎಂದರೆ ಸುಳ್ಳು.

**ಮರು ವಿಚಾರಣೆ: ಇಲ್ಲ.**

**ಸೂಚನೆ:** ಈ ಸಾಕ್ಷಿದಾರರಿಗೆ ಕೇವಲ ಹಿಂದಿ ಭಾಷೆ ಮಾತ್ರ ಬರುತ್ತದೆ ಮತ್ತು ಆ ಕಾರಣದಿಂದ ಮಾನ್ಯ ವಕೀಲರಾದ ಶ್ರೀಮತಿ.ಲಕ್ಷ್ಮೀದೇವಮ್ಮ ರವರ ಸಹಾಯದಿಂದ ಈ ಸಾಕ್ಷಿಯ ವಿಚಾರಣೆಯನ್ನು ಮಾಡಿಕೊಳ್ಳಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.